‘ಮಹಾಭಾರತ ರಚಿಸಿದ್ದು ವಾಲ್ಮೀಕಿ’ ಎನ್ನುವ ಮಾತಿನಿಂದ ಹನಿರತ್ನರಿಗೆ ಅದೆಷ್ಟು ಬೇಸರವಾಯಿತೆಂದರೆ, ಕನ್ನಡ ಚಿತ್ರರಂಗದವರು ಹಾಗೂ ಕರ್ನಾಟಕದ ರಾಜಕಾರಣಿಗಳೆಲ್ಲ ಅವರ ಕಣ್ಣಿಗೆ ಕೃತಘ್ನರಂತೆ ಕಾಣಿಸತೊಡಗಿದರು. ತಮಗಾದ ಅನ್ಯಾಯವನ್ನು ಅವರು ಕವಿರತ್ನರೊಂದಿಗೆ ತೋಡಿಕೊಂಡರು. ಹನಿರತ್ನ–ಕವಿರತ್ನರೊಂದಿಗಿನ ಮಾತುಕತೆ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಹೊಸ ದಿಕ್ಕು ನೀಡುವಂತಹ ಯೋಜನೆಯೊಂದಕ್ಕೆ ನಾಂದಿ ಹಾಡಿತು. ಏನಾ ಯೋಜನೆ?

# ಮಹಾಭಾರತ ರಚಿಸಿದ್ದು ಯಾರು?

■ ಮಹತಿ

ಮಹಾಭಾರತ ರಚಿಸಿದ್ದು ಯಾರು?

ಇದುವರೆಗೆ ಕುರುಕ್ಷೇತ್ರದ ಕಾಪಿರೈಟ್ ತನ್ನದೇ ಎಂದು ಬೀಗುತ್ತಿದ್ದ ಹನಿರತ್ನ ಸಾಹೇಬರು, ಈಗ ಒಮ್ಮಿಂದೊಮ್ಮೆಗೇ ಕುರುಕ್ಷೇತ್ರವನ್ನೂ ಒಳಗೊಂಡ ಮಹಾಭಾರತದ ಕಾಪಿರೈಟ್‌ಗೆ ಸಂಬಂಧಿಸಿದಂತೆ ಬೇರೆಯವರ ಹೆಸರು ಪ್ರಸ್ತಾಪವಾಗುತ್ತಿರುವುದನ್ನು ಕಂಡು ತಳಮಳಗೊಂಡಿದ್ದರು. ಬುದ್ಧಿಯನ್ನು ಬಂಗಾರದಂತೆಯೂ ದುಡ್ಡನ್ನು ನೀರಿನಂತೆಯೂ ಖರ್ಚು ಮಾಡಿ ‘ಕುರುಕ್ಷೇತ್ರ’ ಸಿನಿಮಾ ನಿರ್ಮಿಸಿದ್ದಲ್ಲದೆ, ಆ ಸಿನಿಮಾದ ಟೈಟಲ್‌ನೊಂದಿಗೆ ತಮ್ಮ ಹನಿರತ್ನ ಎನ್ನುವ ಹೆಸರನ್ನೂ ಅಂಟಿಸಿಕೊಂಡಿದ್ದ ಅವರಿಗೆ, ತಮ್ಮ ಪ್ರಯತ್ನವೆಲ್ಲ ರಾಜರಾಜೇಶ್ವರಿ ನಗರದ ದೊಡ್ಡ ಮೋರಿಯಲ್ಲಿ ಹುಣಸೆ ತೊಳೆದಂತೆನ್ನಿಸಿ ಮನಸ್ಸೆಲ್ಲ ಹುಳಿಹುಳಿಯಾಯಿತು.

ಹೋಗಲಿ, ನಾಲಗೆಗೆ ಬ್ರೇಕಿಲ್ಲದ ಆ ಸಾಹೇಬರು ಏನಾದರೂ ಹೇಳಿಕೊಳ್ಳಲಿ, ಈ ಗಾಂಧಿನಗರದ ಪಂಡಿತರು, ಸಿನಿಮಾ ನಿರ್ಮಾತೃಗಳಲ್ಲಿ ಒಬ್ಬರಿಗಾದರೂ ಬುದ್ಧಿ ಬೇಡವೆ? ಯಾರೊಬ್ಬರಾದರೂ ಕುರುಕ್ಷೇತ್ರ ಬರೆದದ್ದು ಹನಿರತ್ನ ಎಂದು ಹೇಳುವುದು ಬೇಡವೆ? ಪ್ಯಾನ್ ಇಂಡಿಯಾ ಸಿನಿಮಾ ಮಾಡಿದರೂ, ಕನ್ನಡ ಚಿತ್ರರಂಗದಲ್ಲೇ ಹೊಸ ಮೈಲಿಗಲ್ಲು ನೆಟ್ಟರೂ ಈ ಸಿನಿಮಾ ಮಂದಿಗೆ ಕೃತಜ್ಞತೆ ಎನ್ನುವುದಿಲ್ಲ ಎನ್ನುವುದು ಮತ್ತೊಮ್ಮೆ ಸಾಬೀತಾಗಿ ಹೋಯಿತು ಎಂದು ಬೇಸರಿಸಿಕೊಂಡ ಹನಿರತ್ನರು, ತಮ್ಮ ದುಕ್ಕ ತೋಡಿಕೊಳ್ಳಲು ಕವಿರತ್ನರಿಗೆ ಫೋನಾಯಿಸಿದರು.

ಅತ್ತ ಕಡೆಯಿಂದ ಕೆಮ್ಮುವ ಸದ್ದು. ಏನೀ ಅಪಶಕುನ, ಕವಿರತ್ನರು ಬೆಳಬೆಳಗ್ಗೆ ಕೆಮ್ಮುತ್ತಿದ್ದಾರಲ್ಲ ಎಂದು ಹನಿರತ್ನರ ಮನಸ್ಸು ಮತ್ತಷ್ಟು ಚಿಕ್ಕದಾಯಿತು. ಅಷ್ಟರಲ್ಲಿ ಕವಿರತ್ನರ ಬದಲಿಗೆ ಫೋನಿನಲ್ಲಿ ಬೇರೆ ಯಾರದೋ ವಾಯ್ಸು ಕೇಳಿಸಿ, ‘ಸೋಪು ಹಾಕಿ ಕೈ ತೊಳೆದುಕೊಳ್ಳಿ’ ಎಂದೆಲ್ಲ ಏನೇನೋ ಹೇಳತೊಡಗಿತು. ಕೈಗಲ್ಲ, ಈವಯ್ಯನ ಬಾಯಿಗೇ ಸೋಪಾಕಬೇಕು, ಈ ಫೋನಿನ ಬಾಯಿಗೆ ಕೆರ ಇಕ್ಕಬೇಕು ಎಂದು ಸಾಹೇಬರು ಸಿಡಿಮಿಡಿಯಿಂದ ಕಾಲ್ ಕಟ್ ಮಾಡಿದರು. ಮತ್ತೆ ಫೋನ್ ಗುಂಡಿ ಅದುಮಬೇಕೆನ್ನುವಷ್ಟರಲ್ಲಿ ಆ ಕಡೆಯಿಂದ ಕಾಲ್ ಬಂತು. ಕವಿರತ್ನರ ಜೇನಿನಂಥ ಧ್ವನಿ ಕೇಳಿಸಿತು.

‘ಹನಿರತ್ನ ಅಗ್ರಜ ಅವರಿಗೆ ಪ್ರಣಾಮಗಳು. ಎಲ್ಲವೂ ಕುಶಲ ತಾನೆ?’

ಹನಿ ಸಾಹೇಬರಿಗೆ ಸಿಟ್ಟು ನೆತ್ತಿಗೇರಿತು. ‘ನಿನ್ನ ಬಣ್ಣದ ಮಾತು ನನ್ನ ಹತ್ರ ಬೇಡಪ್ಪ. ಕುರುಕ್ಷೇತ್ರ ಮುಗಿದ್ರೂ ಇನ್ನೂ ನಿನ್ನ ಭಾಷೆ ಸರಿಯೋಗಿಲ್ಲ ಅಂದ್ರೆ ಹೆಂಗೆ. ಹಿಂಗೆ ಡೈಲಾಗ್ ಬರೆದಿದ್ದಕ್ಕೇ ನಂ ಸಿನಿಮಾ ಇಂಟರ್‌ನ್ಯಾಷನಲ್ ಲೆವೆಲ್‌ಗೆ ಹೋಗೋದು ತಪ್ಪೋಯ್ತು...’ ಎಂದು ರಾಂಗಾದರು.

ಕವಿರತ್ನರ ಡೈಲಾಗ್ ಡೆಲಿವರಿ ಒಮ್ಮೊಂದೊಮ್ಮೆಗೇ ದ್ವಾಪರದಿಂದ ಹನಿರತ್ನರ ಕಾಲದ ಗಾಂಧಿನಗರಕ್ಕೆ ಬಂದಿಳಿಯಿತು.

‘ಯಾಕಣ್ಣ ಹಿಂಗಂತೀರಿ. ಮೊನ್ನೆ ಬೆಂಗಳೂರು ಫೆಸ್ಟಿವಲ್‌ನಾಗೆ ಬೆಸ್ಟು ಸಿನಿಮಾ ಅಂತ ಅವಾರ್ಡ್ ಎತ್ತಿಕೊಂಡಿದ್ದನ್ನು ಆಗಲೇ ಮರೆತುಬಿಟ್ರಾ? ಅದು ಇಂಟರ್‌ನ್ಯಾಷನಲ್ ಫೆಸ್ಟಿವಲ್ ಕಣಣ್ಣ! ಅಲ್ಲಿಗೆ ನಮ್ಮ ಸಿನಿಮಾ ಇಂಟರ್ನಾಷ್ಯನಲ್ ಲೆವೆಲ್‌ಗೆ ಹೋದಂಗಾಯ್ತಲ್ಲ. ಅದಿರಲಿ ಬಿಡಿ, ನೀವು ಚೆನ್ನಾಗಿದ್ದೀರಿ ತಾನೆ? ನಿರ್ಮಾಪಕರು, ಅನ್ನದಾತರು ನೀವು, ನೀವು ಚೆನ್ನಾಗಿರಬೇಕು...’

ಕವಿರತ್ನರ ಮಾತು ಮುಗಿಯುವ ಮುನ್ನವೇ ಸಾಹೇಬರು ಮೂಗು ತೂರಿಸಿದರು. ‘ಇನ್ನೂ ಕೆಮ್ಮು ದಮ್ಮು ಸುರುವಾಗಿಲ್ಲ. ಅದಕ್ಕೆ ಮೊದಲೇ ನೀವೆಲ್ಲ ಸೇರಿ ಚಾಪೇಲಿ ಸುತ್ತಿಕೊಂಡು ಹೋಗೋ ಪ್ರೋಂಗ್ರಾಂ ಮಾಡಿದಂಗಯ್ತೆ’ ಎಂದರು.

‘ಯಾಕಣ್ಣ ಹಿಂಗೆಲ್ಲ ಮಾತಾಡ್ತಿದ್ದೀರಿ. ಏನಾಯ್ತು?’

‘ಆಗೋದೇನು ಬಂತು ಮಣ್ಣು. ನೀನೇ ಹೇಳ್ದಂಗೆ ನಂ ಸಿನಿಮಾ ಇಂಟರ್‌ನ್ಯಾಷನಲ್ ಅವಾರ್ಡ್ ತಗೊಂಡಯ್ತೆ. ಆದರೇನು ಬಂತು ಲಾಭ. ನಂ ಲೋಕಲ್‌ನೋರಿಗೇನೆ ಸಿನಿಮಾ ಇಂಪಾರ್ಟೆನ್ಸೇ ಅರ್ಥವಾಗಿಲ್ಲ.’

‘ಯಾಕೆ, ಯಾರೇನಾದ್ರೂ ಅಂದ್ರಾ? ಪೇಪರ್‌ನೋರು ಏನಾದ್ರೂ ಬರದವ್ರಾ? ಅವರ ಬಗ್ಗೆ ತಲೆಕೆಡಿಸಿಕೋ ಬೇಡಣ್ಣೋ... ನಾನು ಮಾತಾಡ್ತೀನಿ...’

‘ಅಯ್ಯೋ, ಪೇಪರ್‌ನೋರ ವಿಷ್ಯ ಅಲ್ಲ ಬಿಡು. ಅವರು ಪಾಪದೋರು. ನಮಗೆ ಬೇಕಾದೋರು. ಸಮಸ್ಯೆ ಬಂದಿರೋದು ರಾಜಕೀಯದೋರಿಂದ.’

‘ನೀನೂ ರಾಜಕೀಯದೋನಾಗಿ ಹಿಂಗೆ ಹೇಳಿದ್ರೆ ಹೆಂಗಣ್ಣ... ಅದಿರ್ಲಿ, ಈಗ ಕೆಮ್ಮಿದ್ದು ಯಾರು ಅಂತ ಹೇಳು.’

‘ಅದೇ ಕಣಪ್ಪ ನಮ್ಮ ಹೊಸ ದೋಸ್ತಿ,